# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.50/2024

Pw-01

| | |
|---|---|
| ಸಾಕ್ಷಿದಾರರ ಹೆಸರುಃ | ಶ್ರೀ ಸಂತೋಷ ಜಿ |
| ತಂದೆಃಗಂಡನ ಹೆಸರುಃ | ಶ್ರೀ ಬಿ.ಎಂ ಗಂಗಯ್ಯ |
| ವಯಸ್ಸುಃ | 24 ವರ್ಷ |
| ಉದ್ಯೋಗಃ | ಖಾಸಗಿ ಕೆಲಸ |
| ವಾಸ ಸ್ಥಳಃ | ಆನಂದಪುರ, ತಾಃಗೌರಿಬಿದನೂರು, ಜಿಃಚಿಕ್ಕಬಳ್ಳಾಪುರ |

**ದಿನಾಂಕ:03.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**Evidence before charge ಹಂತದ ಸಾಕ್ಷಿ ವಿಚಾರಣೆಃ**

**ಮುಖ್ಯ ವಿಚಾರಣೆಃ ಪಿರ್ಯಾದಿ ಪರವಾಗಿ ಶ್ರೀ ಜಿ.ಜಿ.ಡಿ ವಕೀಲರಿಂದಃ**

1. ನಾನು ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ಆನಂದಪುರದಲ್ಲಿ ವಾಸವಾಗಿರುತ್ತೇನೆ. ನನಗೆ ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಬಾಳಂಬೀಡ ಗ್ರಾಮದ ಶ್ರೀ ನಿಂಗಪ್ಪ ಹುಚ್ಚವ್ವ ಹೊಸೂರು ಇವರ ಪರಿಚಯ ಇತ್ತು. ನಾನು ಸದರಿ ನಿಂಗಪ್ಪ ಹುಚ್ಚವ್ವ ಹೊಸೂರು ಇವರ ಮೂಲಕ ಬಾಳಂಬೀಡ ಗ್ರಾಮಕ್ಕೆ ಮಕ್ಕಳಿಗೆ ಪಾಠ ಮಾಡುವ ಸಲುವಾಗಿ 2023 ರ ಜನವರಿ ಮಾಹೆಯಲ್ಲಿ ಬಂದಿದ್ದೆನು. ಬಾಳಂಬೀಡ ಗ್ರಾಮದ ಮಕ್ಕಳು ಮತ್ತು ಅವರ ಪೋಷಕರು ನಮ್ಮ ಮಕ್ಕಳಿಗೆ ಪಾಠ ಮಾಡಿ ಎಂದು ಕೇಳಿಕೊಂಡು ನಮ್ಮ ಮನೆಗೆ ದಿನಾಂಕಃ05.02.2023 ರಂದು ಸಂಜೆ 7.00 ಗಂಟೆಗೆ ಬಂದಿದ್ದರು. ಆಗ ನಾನು ಮತ್ತು ಸದರಿ ಮಕ್ಕಳ ಪೋಷಕರು ನಮ್ಮ ಮನೆಯ ಒಳಗಡೆ ಮಾತನಾಡುತ್ತಿದ್ದೆವು.

2. ಆಗ ಒಂದು ಗುಂಪಿನ ಜನರು ನಮ್ಮ ಮನೆಯ ಒಳಗಡೆ ಬಂದರು. ಅವರ ಪೈಕಿ ನಾಗೇಶ ಶಿವಪೂಜಿ ಭಟ್ಟ, ಪ್ರವೀಣ ಯಲ್ಲಪ್ಪ ತೆಪ್ಪದ, ಸುನೀಲ್ ಬೊಮ್ಮಣ್ಣನವರು ಮತ್ತು ಸಚಿನ್ ಸದಾಶಿವಪ್ಪ ರಾಮಣ್ಣನವರ ಮತ್ತು ಅವರ ಜೊತೆ ತುಂಬಾ ಜನರು ಇದ್ದರು. ಸದರಿ 1 ರಿಂದ 4 ನೇ ಆರೋಪಿತರು ಮತ್ತು ಇತರರು ನನ್ನ ಹೆಸರು ಮತ್ತು ನನ್ನ ಜಾತಿಯ ಹೆಸರನ್ನು

ಕೇಳಿದರು. ಆಗ ನಾನು ನನ್ನ ಜಾತಿಯ ಹೆಸರನ್ನು ಮಾದಿಗ ಜಾತಿ ಎಂದು ಹೇಳಿದೆನು. ಆಗ ಆರೋಪಿತರು ಮತ್ತು ಇತರರು ನನಗೆ ನಮ್ಮೂರಿನಲ್ಲಿ ಬ್ರಾಹ್ಮಣರು, ಜೈನರು, ಆರ್ಯರು ದೊಡ್ಡ-ದೊಡ್ಡವರು ಇರುತ್ತಾರೆ, ನೀವು ಮಾದಿಗರು, ನೀನು ಅವರಿಗೆ ಹೇಗೆ ಟ್ಯೂಷನ್ ಮಾಡುತ್ತೀಯಾ ಎಂದು ನನಗೆ ಬೈದರು ಮತ್ತು ನನ್ನ ಕೆನ್ನೆಗೆ ಹೊಡೆದರು. ಆಗ ನಾನು ಆರೋಪಿತರು ಮತ್ತು ಇತರರಿಗೆ ಹೊಡೆಯ ಬೇಡಿರಿ ಅಣ್ಣಾ ಎಂದು ಕೇಳಿಕೊಂಡರೂ ಸಹ ಆರೋಪಿತರು ಮತ್ತು ಇತರರು ನನಗೆ ಕೆಟ್ಟ-ಕೆಟ್ಟ ಮಾತುಗಳಿಂದ ಬೈದು, ಕಾಲಿನಿಂದ ನನ್ನ ಹೊಟ್ಟೆಗೆ ಒದ್ದರು.

3. ಆಗ ಆರೋಪಿತರು ನನ್ನನ್ನು ಆಡೂರು ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. ಆರೋಪಿತರು ನನ್ನ ಮೇಲೆ ದಿನಾಂಕಃ06.02.2023 ರಂದು ಸುಳ್ಳು ಕೇಸನ್ನು ಹಾಕಿ ನನ್ನನ್ನು ಜೈಲಿಗೆ ಕಳಿಸಿರುತ್ತಾರೆ. ಅಂದಿನಿಂದ ನಾನು ದಿನಾಂಕಃ10.02.2023 ರ ತನಕ ನ್ಯಾಯಾಂಗ ಬಂಧನದಲ್ಲಿದ್ದೆನು. ನಂತರ ನಾನು ಜೈಲಿನಿಂದ ಬಿಡುಗಡೆಯಾಗಿ ದಿನಾಂಕಃ11.02.2023 ರಂದು ಆಡೂರು ಪೊಲೀಸ್ ಠಾಣೆಗೆ ಹೋಗಿ 1 ರಿಂದ 4 ನೇ ಆರೋಪಿಗಳ ವಿರುದ್ಧ ದೂರನ್ನು ದಾಖಲು ಮಾಡಿದೆನು. ಸದರಿ ದಿನಾಂಕಃ11.02.2023 ರ ಲಿಖಿತ ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-1 ಎಂದು, ನನ್ನ ಸಹಿಯನ್ನು ನಿಪಿ-1(ಎ)ಎಂದು ಗುರುತಿಸಲಾಯಿತು. ನಾನು ಕೊಟ್ಟ ದೂರಿನ ಆಧಾರದ ಮೇಲೆ ಪೊಲೀಸರು ಆರೋಪಿಗಳ ವಿರುದ್ಧ FIR ನ್ನು ನೋಂದಣಿ ಮಾಡಿರುತ್ತಾರೆ. ಸದರಿ FIR ನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ನಿಪಿ-2 ರ FIR ನಲ್ಲಿ ನನ್ನ ಡಿಜಿಟಲ್ ಸಹಿ ಇರುತ್ತದೆ.

4. ದೂರು ಕೊಟ್ಟ ನಂತರ ಪೊಲೀಸರು ನನ್ನನ್ನು ಘಟನಾ ಸ್ಥಳದಲ್ಲಿ ನನ್ನನ್ನು ಕರೆಸಿ ಊರಿನವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿ, ಪೋಟೋಗಳನ್ನು ತೆಗೆದುಕೊಂಡು ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸದರಿ ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-3 ಎಂದು, ನನ್ನ ಸಹಿಯನ್ನು ನಿಪಿ-3(ಎ)ಎಂದು ಗುರುತಿಸಲಾಯಿತು. ಪೊಲೀಸರು ತೆಗೆದ 2 ಪೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಕ್ರಮವಾಗಿ ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು.

5. ಆರೋಪಿತರು ರಾಜಕೀಯ ವ್ಯಕ್ತಿಗಳಾಗಿದ್ದು, ಪೊಲೀಸರು ನನ್ನನ್ನು ವಿಚಾರಣೆ ಮಾಡದೇ ನ್ಯಾಯಾಲಯಕ್ಕೆ 'B' ವರದಿಯನ್ನು ಸಲ್ಲಿಸಿರುತ್ತಾರೆ. ಆದ ಕಾರಣ ನನಗೆ ನ್ಯಾಯಕೊಡಿಸಬೇಕೆಂದು ನ್ಯಾಯಾಲಯದಲ್ಲಿ ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ 1 ರಿಂದ 4 ನೇ ಆರೋಪಿತರ ಪರವಾಗಿ ಶ್ರೀ ಎ.ಎಸ್.ಸಿ ವಕೀಲರಿಂದಃ**

ಶ್ರೀ ಎ.ಎಸ್.ಸಿ ವಕೀಲರನ್ನು ಕರೆಸಲಾಯಿತು. ಗೈರು ಹಾಜರು ಉಳಿದಿರುತ್ತಾರೆ. 1 ರಿಂದ 4 ನೇ ಆರೋಪಿತರು ಹಾಜರಿದ್ದು ತಮ್ಮ ವಕೀಲರು NOC ಕೊಟ್ಟಿರುತ್ತಾರೆ ಎಂದು ಪಾಟೀ ಸವಾಲಿಗೆ ಕೋರಿಕೊಂಡ ಮೇರೆಗೆ ನಾಯದಾನ ಹಿತದೃಷ್ಠಿಯಿಂದ ರೂ.3,000/- ಖರ್ಚಿನೊಂದಿಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.